ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
Examination Section

ಗೌಪ್ಯ ವಿಭಾಗ
Confidential Branch

ಫೋನ ನಂ. 0836-2215259
ಫ್ಯಾಕ್ಸ ನಂ. 0836-2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/489 ದಿನಾಂಕ:21.03.2022

## ತಿದ್ದುಪಡೆ ಸುತ್ತೋಲೆ

**ವಿಷಯ:** 2021-2022ನೇ ಸಾಲಿಗೆ NEP ಅಡಿಯಲ್ಲಿ ಸ್ನಾತಕ ಪದವಿಗಳ 1ನೇ ಸೆಮಿಸ್ಟರಗೆ ಪ್ರವೇಶ ಪಡೆದುಕೊಂಡ ರೆಗ್ಯುಲರ್ ವಿದ್ಯಾರ್ಥಿಗಳಿಗೆ **DSCC/SEC** ವಿಷಯಗಳಿಗೆ ಮಾರ್ಚ-2022ರಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವ ಕುರಿತು.

**ಉಲ್ಲೇಖ:**
1. No.KU.Aca(S&T)RPH-394A/2021-22/1156 Date:10.12.2021.
2. ಕುಲಪತಿಗಳ ಆದೇಶ ದಿನಾಂಕ: 25.01.2022.
3. ನಂ.ಕವಿವಿ/ಪರೀಕ್ಷಾ(ಗೌಪ್ಯ)/2022/485 ದಿನಾಂಕ: 15.03.2022

-@-

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಸುವುದೇನೆಂದರೆ, ಉಲ್ಲೇಖ 3 ರನ್ವಯ 2021-2022ನೇ ಸಾಲಿಗೆ NEP ಅಡಿಯಲ್ಲಿ ಸ್ನಾತಕ ಪದವಿಗಳ 1ನೇ ಸೆಮಿಸ್ಟರಗೆ ಪ್ರವೇಶ ಪಡೆದುಕೊಂಡ ರೆಗ್ಯುಲರ್ ವಿದ್ಯಾರ್ಥಿಗಳಿಗೆ **DSCC/SEC** ವಿಷಯಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಮಹಾವಿದ್ಯಾಲಯದ ಮಟ್ಟದಲ್ಲಿ ವೇಳಾಪಟ್ಟಿಯನ್ನು ತಯಾರಿಸಿ ತಮ್ಮ ಮಹಾವಿದ್ಯಾಲಯದ ಆಂತರಿಕ ಪರೀಕ್ಷಕರಿಂದ ಪರೀಕ್ಷೆಗಳನ್ನು ದಿನಾಂಕ:**24.03.2022 ರಿಂದ 30.03.2022** ರ ಒಳಗಾಗಿ ಜರುಗಿಸಲು ಸೂಚಿಸಲಾಗಿತ್ತು.

ಮುಂದುವರೆದು, ಕಾರಣಾಂತರ ಪ್ರಾಯೋಗಿಕ ಪರೀಕ್ಷೆಗಳನ್ನು ಮೂಂದುಡಲಾಗಿದ್ದು, ಸದರಿ ಪರೀಕ್ಷೆಗಳನ್ನು **ದಿನಾಂಕ 30.03.2022 ರಿಂದ 07.04.2022ರವರೆಗೆ** ಜರುಗಿಸಲು ಸೂಚಿಸಲಾಗಿದೆ.

**DSCC** ವಿಷಯಗಳಿಗೆ ಈ ಹಿಂದಿನಂತೆ ದಿನಕ್ಕೆ ಮೂರು ಗಂಟೆ ಅವಧಿಯ ಎರಡು ಬ್ಯಾಚ್‌ಗಳಲ್ಲಿ ಪರೀಕ್ಷೆ ಜರುಗಿಸುವುದು ಹಾಗೂ **SEC** ವಿಷಯಗಳಿಗೆ ದಿನಕ್ಕೆ ಎರಡು ಗಂಟೆ ಅವಧಿಯ ಮೂರು ಬ್ಯಾಚ್‌ಗಳಲ್ಲಿ ಪರೀಕ್ಷೆ ಜರುಗಿಸುವುದು.

ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯವಾದ ತಕ್ಷಣ ಎಲ್ಲ ವಿಷಯಗಳ **(DSCC/SEC)** ಅಂಕಗಳನ್ನು ಆಯಾ ಮಹಾವಿದ್ಯಾಲಯಗಳಲ್ಲಿ ಸಿದ್ಧಪಡಿಸಿ ಇಟ್ಟುಕೊಳ್ಳುವುದು. ನಂತರ ಆಂತರಿಕ ಪರೀಕ್ಷಕರು ಪ್ರಾಚಾರ್ಯರ ಸಮ್ಮುಖದಲ್ಲಿ UUCMS Portal ನಲ್ಲಿ ಪ್ರಾಯೋಗಿಕ ಅಂಕಗಳನ್ನು ದಾಖಲಿಸಿ ಆಂತರಿಕ ಪರೀಕ್ಷಕರ ಸಹಿಯೊಂದಿಗೆ ದ್ವಿ-ಪ್ರತಿಯಲ್ಲಿ ತಯಾರಿಸಿ ಒಂದು ಪ್ರತಿಯನ್ನು ಗಣಕಯಂತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಪರೀಕ್ಷಾ ವಿಭಾಗದ ಸಂಬಂಧಿಸಿದ ಅಧೀಕ್ಷಕರಿಗೆ ಆಯಾ ಮಹಾವಿದ್ಯಾಲಯಗಳ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯವಾದ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

21/3/22
ಕುಲಸಚಿವರು (ಮೌಲ್ಯಮಾಪನ)

**ಗೆ,**

**ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು**
**ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :**

1. **ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.**
2. **ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.**
3. **ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.**
4. **ಪರೀಕ್ಷಾ ವಿಭಾಗದ ಎಲ್ಲ ಶಾಖೆಗಳ ಅಧೀಕ್ಷಕರ ಮಾಹಿತಿಗಾಗಿ.**
5. **ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.**
6. **ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.**